ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2009–10 ರಿಂದ 2014–15ನೇ ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಮತ್ತು ಟರ್ನ್ ಕೀ ಫೀ(ನಿರ್ವಹಣಾ ಮೊತ್ತ) ಗಳನ್ನು ಕಾರ್ಯಕ್ರಮದಡಿ ಬಾಕಿ ಇರುವ ಜಿಲ್ಲೆಗಳಿಂದ ಹಿಂಪಡೆದು ಅಗತ್ಯವಿರುವ ಜಿಲ್ಲೆಗಳಿಗೆ ವರ್ಗಾಯಿಸಿ ಮರು ಹಂಚಿಕೆ ಮಾಡುವ ಕುರಿತು.

ಓದಲಾಗಿದೆ :
1. MNRE ಪತ್ರ ಸಂಖ್ಯೆ FN 13-16-2015-BG ದಿನಾಂಕ 26/10/2015.
2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 87 ಜೈಅಯೋ 2015, ದಿನಾಂಕ 28.10.2015, 02.01.2016, 12.01.2016 ಮತ್ತು 01.06.2016.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 87 ಜೈಅಯೋ 2015, ದಿನಾಂಕ 03.08.2016.

## ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿ ನಿರ್ದೇಶಕರು(ಜೈವಾನಿಲ), ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿ ರವರು ನಿಗದಿತ ನಮೂನೆಯಲ್ಲಿ 2009–10 ರಿಂದ 2014–15ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಪಾವತಿಸಲು ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ ವಿವರಗಳನ್ನು ನೀಡುವಂತೆ ಕೋರಿರುತ್ತಾರೆ.

ಇದರನ್ವಯ ಮೇಲೆ ಓದಲಾದ (2)ರಲ್ಲಿ 2009–10 ರಿಂದ 2014–15ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಪಾವತಿಸಲು ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ ವಿವರಗಳನ್ನು ನಿಗದಿತ ನಮೂನೆಯಲ್ಲಿ ನೀಡುವಂತೆ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಕೋರಲಾಗಿದ್ದು, ಬಾಗಲಕೋಟೆ, ಚಿತ್ರದುರ್ಗ, ರಾಮನಗರ ಜಿಲ್ಲಾ ಪಂಚಾಯತ್‌ಗಳನ್ನು ಹೊರತುಪಡಿಸಿ ಇನ್ನುಳಿದ 27 ಜಿಲ್ಲೆಗಳಿಂದ ಮಾಹಿತಿಯನ್ನು ಕ್ರೋಢಿಕರಿಸಿ, ರೂ.743.10ಲಕ್ಷಗಳ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ ಪಾವತಿಸುವುದು ಬಾಕಿ ಇರುವುದು ಕಂಡು ಬಂದಿದೆ.

2015–16ನೇ ಸಾಲಿನ 31ನೇ ಮಾರ್ಚ್ 2016ರ ಅಂತ್ಯಕ್ಕೆ(ಪ್ರಗತಿ ವರದಿ ಆಧರಿಸಿ) ಕಾರ್ಯಕ್ರಮದಡಿ ರೂ.951.75ಲಕ್ಷಗಳು ಬ್ಯಾಂಕ್ ಖಾತೆಯಲ್ಲಿ ಉಳಿಕೆಯಾಗಿರುವ ಅನುದಾನದಲ್ಲಿ ರೂ.743.10ಲಕ್ಷಗಳ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ ಪಾವತಿಸುವುದು ಬಾಕಿ ಇದ್ದು, ಈ ಪೈಕಿ ಮೇಲೆ ಓದಲಾದ (3)ರಲ್ಲಿ ರೂ.361.50ಲಕ್ಷಗಳನ್ನು ಜಿಲ್ಲಾ ಪಂಚಾಯತಿಗಳಲ್ಲಿ ಉಳಿಕೆಯಾಗಿರುವ ಅನುದಾನದ ಮಿತಿಗೊಳಪಟ್ಟು ಹಂಚಿಕೆ ಮಾಡಿ 2009–10 ರಿಂದ 2014–15ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ (ನಿರ್ವಹಣಾ ಮೊತ್ತ) ವನ್ನು ಪಾವತಿಸಲು ಅನುಮತಿಸಿ ಆದೇಶಿಸಿದೆ.

2009–10 ರಿಂದ 2014–15ನೇ ಸಾಲಿನವರೆಗೆ ಬೆಳಗಾವಿ, ಉತ್ತರ ಕನ್ನಡ, ತುಮಕೂರು, ಹಾವೇರಿ, ಚಿಕ್ಕಮಗಳೂರು, ಹಾಸನ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ರೂ.134.30ಲಕ್ಷಗಳ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ (ನಿರ್ವಹಣಾ- ಮೊತ್ತ) ವನ್ನು ಪಾವತಿಸುವುದು ಬಾಕಿ ಇರುತ್ತದೆ.

ಕಾರ್ಯಕ್ರಮದ ಅನುಷ್ಠಾನದ ಹಿತದೃಷ್ಟಿಯಿಂದ, ಕಾರ್ಯಕ್ರಮದಡಿ ಲಭ್ಯವಿರುವ ಅನುದಾನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನ ಬಾಕಿ ಇರಿಸಿಕೊಂಡಿರುವ ಬಾಗಲಕೋಟೆ, ಬೆಂಗಳೂರು(ನ), ಧಾರವಾಡ, ಬಳ್ಳಾರಿ, ದಾವಣಗೆರೆ, ಗದಗ ಮತ್ತು ಕೊಪ್ಪಳ ಜಿಲ್ಲೆಗಳಿಂದ ಪಾವತಿಸಲು ಬಾಕಿ ಇರುವ ಅಗತ್ಯ ಅನುದಾನವನ್ನು ಹಿಂಪಡೆದು ಅವಶ್ಯಕತೆ ಇರುವ ಬೆಳಗಾವಿ, ಉತ್ತರ ಕನ್ನಡ, ತುಮಕೂರು, ಹಾವೇರಿ, ಚಿಕ್ಕಮಗಳೂರು, ಹಾಸನ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ವರ್ಗಾಯಿಸಿ ಮರು ಹಂಚಿಕೆ ಮಾಡಿ 2009-10 ರಿಂದ 2014-15ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ (ನಿರ್ವಹಣಾ ಮೊತ್ತ) ವನ್ನು ಸಂಬಂಧಿತ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪಾವತಿಸಲು ಅನುಮತಿ ನೀಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ. .

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/87(1)/ಜೈಅಯೋ/2015 ಬೆಂಗಳೂರು, ದಿನಾಂಕ 28.07.2016.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2009-10 ರಿಂದ 2014-15ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಪಾವತಿಸಲು ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ್ ಕೀ ಫೀ (ನಿರ್ವಹಣಾ ಮೊತ್ತ) ವನ್ನು ಹೆಚ್ಚಿನ ಅನುದಾನದ ಲಭ್ಯತೆ ಹೊಂದಿದ ಕೆಳಕಂಡ ಜಿಲ್ಲೆಗಳಿಂದ ಅಗತ್ಯವಿರುವ ಅನುದಾನವನ್ನು ಹಿಂಪಡೆದು ಅವಶ್ಯಕತೆ ಜಿಲ್ಲಾ ಪಂಚಾಯತ್‌ಗಳಿಗೆ ವರ್ಗಾಯಿಸಿ ಮರು ಹಂಚಿಕೆ ಮಾಡಿ ಕೆಳಕಂಡ ನಿಬಂಧನೆಗೊಳಪಟ್ಟು ಪಾವತಿಸಲು ಅನುಮತಿ ನೀಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಲಭ್ಯವಿರುವ ಅನುದಾನ | ಹಿಂಪಡೆದ ಅನುದಾನ | ವರ್ಗಾಯಿಸಿದ ಜಿಲ್ಲೆ | ವರ್ಗಾಯಿಸಿ ಹಂಚಿಕೆ ಮಾಡಿದ ಅನುದಾನ |
|---|---|---|---|---|---|
| 1 | ಬಾಗಲಕೋಟೆ | 34.52 | 25.00 | ಬೆಳಗಾವಿ | 95.02 |
| 2 | ಬೆಂಗಳೂರು(ನ) | 35.38 | 20.02 | | |
| 3 | ಧಾರವಾಡ | 50.12 | 50.00 | | |
| 4 | ಬಳ್ಳಾರಿ | 20.89 | 17.96 | ಉತ್ತರ ಕನ್ನಡ | 17.96 |
| 5 | ದಾವಣಗೆರೆ | 46.26 | 15.94 | ತುಮಕೂರು | 15.94 |
| 6 | ಗದಗ | 18.84 | 2.55 | ಹಾವೇರಿ | 2.55 |
| 7 | ಕೊಪ್ಪಳ | 32.06 | 2.83 | ಚಿಕ್ಕಮಗಳೂರು | 1.15 |
| | | | | ಹಾಸನ | 1.49 |
| | | | | ಚಿಕ್ಕಬಳ್ಳಾಪುರ | 0.19 |
| **ಒಟ್ಟು** | | | **134.30** | | **134.30** |

(ಹಿಂಪಡೆದು ವರ್ಗಾಯಿಸಿದ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 87 ಜೈಅಯೋ 2015, ದಿನಾಂಕ 28.07.2016ರ ಅನುಬಂಧದಲ್ಲಿ ವರ್ಷವಾರು ವಿವರಿಸಲಾದಂತೆ ಅವಶ್ಯಕವಿರುವ ಕೇಂದ್ರ ಸಹಾಯಧನ ಮತ್ತು ಟರ್ನ್ ಕೀ ಫೀ (ನಿರ್ವಹಣಾ ಮೊತ್ತ) ವನ್ನು ಪಾವತಿಸಲು ಕ್ರಮವಹಿಸುವುದು.)

1. 2009-10ನೇ ಸಾಲಿನಿಂದ 2014-15ನೇ ಸಾಲಿನವರೆಗೆ ನಿರ್ಮಿಸಿದ ಅನಿಲ ಸ್ಥಾವರಗಳಿಗೆ ಅನುಬಂಧದಲ್ಲಿ ವಿವರಿಸಲಾದಂತೆ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಟರ್ನ್ ಕೀ ಫೀ (ನಿರ್ವಹಣಾ ವೆಚ್ಚ)ವನ್ನು ಪಾವತಿಸುವುದು.

2. ಅನುಬಂಧದಲ್ಲಿ ವಿವರಿಸಲಾದಂತೆ ಕೇಂದ್ರ ಸಹಾಯಧನ ಮತ್ತು ನಿರ್ವಹಣಾ ವೆಚ್ಚವನ್ನು GSK ರಡಿ ಇಂಧೀಕರಿಸಿ ಬಿಡುಗಡೆಗೆ ಕ್ರಮವಹಿಸುವುದು.

3. ಮಾರ್ಗಸೂಚಿಯನ್ವಯ ಟರ್ನ್ ಕೀ ಫೀ ನಿರ್ವಹಣಾ ಮೊತ್ತವನ್ನು ಪಾವತಿಸುವಲ್ಲಿ ನಿರ್ವಹಣಾ ಅವಧಿಯಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ಕಾರ್ಯಕ್ಷಮತೆ ಕುರಿತಂತೆ ಫಲಾನುಭವಿಗಳಿಂದ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ದೂರುಗಳೇನಾದರೂ ಸಲ್ಲಿಕೆಯಾಗಿರುವ ಕುರಿತಂತೆ ಪರಿಶೀಲಿಸಿ ಟರ್ನ್ ಕೀ ಫೀ ನಿರ್ವಹಣಾ ವೆಚ್ಚವನ್ನು ಪಾವತಿಸಲು ಕ್ರಮ ವಹಿಸುವುದು.

4. 2009-10 ರಿಂದ 2014-15ನೇ ಸಾಲಿನವರೆಗೆ ಲಭ್ಯವಿರುವ ಕೇಂದ್ರ ಅನುದಾನದಲ್ಲಿ ಕೇಂದ್ರ ಸಹಾಯಧನ ಮತ್ತು ಟರ್ನ್ ಕೀ ಫೀ ನಿರ್ವಹಣಾ ಮೊತ್ತಕ್ಕೆ ಕೇಂದ್ರ ಪಾಲಿನಡಿ ವೆಚ್ಚ ಭರಿಸಿ, ಸರ್ಕಾರಕ್ಕೆ ಈಗಾಗಲೇ ನೀಡಿರುವ ಕೇಂದ್ರ ಸರ್ಕಾರದ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸರ್ಕಾರಕ್ಕೆ ನೀಡುವುದು.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ ಗ್ರಾಅಪ 377 ಪಿಬಿಎಸ್ 2016 ದಿನಾಂಕ 21.07.2016ರಲ್ಲಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ನ), ಧಾರವಾಡ, ಬಳ್ಳಾರಿ, ದಾವಣಗೆರೆ, ಗದಗ, ಕೊಪ್ಪಳ, ಬೆಳಗಾವಿ, ಉತ್ತರ ಕನ್ನಡ, ತುಮಕೂರು, ಹಾವೇರಿ, ಚಿಕ್ಕಮಗಳೂರು, ಹಾಸನ ಮತ್ತು ಚಿಕ್ಕಬಳ್ಳಾಪುರ.
3. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ನ), ಧಾರವಾಡ, ಬಳ್ಳಾರಿ, ದಾವಣಗೆರೆ, ಗದಗ, ಕೊಪ್ಪಳ, ಬೆಳಗಾವಿ, ಉತ್ತರ ಕನ್ನಡ, ತುಮಕೂರು, ಹಾವೇರಿ, ಚಿಕ್ಕಮಗಳೂರು, ಹಾಸನ ಮತ್ತು ಚಿಕ್ಕಬಳ್ಳಾಪುರ.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
6. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
7. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.